
www.buntsanghablr.com

ಆಗಸ್ಟ್ 2017    ಸಂಪುಟ 13    ಸಂಚಿಕೆ 08

# ಸ್ನೇಹ ಚಿಂತನೆ

ಮಾಸ ಪತ್ರಿಕೆ

## ಭಾವಪೂರ್ಣ ಶ್ರದ್ಧಾಂಜಲಿ



**ಡಾ|| ಐ.ವಿ.ಶೆಟ್ಟಿ**

ಮಾಜಿ ಅಧ್ಯಕ್ಷರು



**ಪಿ.ವಿ.ಶೆಟ್ಟಿ**

ಡೋನರ್ ಟ್ರಸ್ಟಿ



ಬಂಟ್ಸ್ ಸಂಘ ಆರ್.ಎಸ್.ಎಸ್.
ಸಂಯುಕ್ತ ಪದವಿ ಪೂರ್ವ
ವಿದ್ಯಾರ್ಥಿಗಳ ಪದಗ್ರಹಣ ಸಮಾರಂಭ

BUNTS' SANGHA BANGALORE
(A Charitable Institution)
324, Chord Road, Vijayanagar, Bengaluru - 560 040.
P : 080 - 2339 9323 / 2339 9635  E: info@buntsanghablr.com

ಸಂಚಿಕೆ ಬೆಲೆ ರೂ. 1/-




Garden City 's *Finest Boutique Hotel* **Now Open**

Traditional hospitality with a slick ambience


# MODERNITY WITH CLASS











ROOMS
Refresh, Relax & Relieve



DINING RESTAURANT
Indulge In Everything That Is Nice

Experience best-in-comfort and standards of living from the moment when you step in. Attide is the finest boutique hotel in Bangalore where exceptional indulgence awaits for you. We offer exclusive rooms and Multi-Cuisine Fine Dining with modern style Restrobar and Coffee Shop.

Attide business hotel is located very close to Jakkur Aerodrome, Yelahanka Post, Bangalore. We ensure to meet the needs of our guests by providing excellent facilities. Being the best business hotel in Bangalore, Attide blends comfort and luxury to give an unparalleled experience which makes our guests visit us again in there next trip.




OVERVIEW OF BANQUET HALL



Café Delicas has spacious ambiance with well-appointed interiors making it an ideal place to have best cafe experience like never before.

Urban flavours is a multi-cuisine restaurant near Bangalore international Airport



| Seating Style | Theater | Circular | U-shaped | Boardroom | Classroom |
|---|---|---|---|---|---|
| | 530 | 380 | 145 | 156 | 210 |

nathicreations@gmail.com

**ATTIDE HOTEL**, Opp Jakkur Aerodrome, Allalasandra, Yelahanka, Bangalore - 560065. Phone: 080 2217 7177 I Email: info@attidehotels.com I www.attidehotels.com

ADVT

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 13** **AUGUST 2017** **ISSUE 08**

**ಸಾಹಿತ್ಯ - ಪ್ರಕಾಶನ ಸಮಿತಿ**

ಅಧ್ಯಕ್ಷರು :
**ಎಸ್. ಅಶೋಕ್‌ಕುಮಾರ್ ಶೆಟ್ಟಿ**

ಗೌ॥ ಸಂಪಾದಕರು:
**ರವಿರಾಜ್ ಎಸ್. ಶೆಟ್ಟಿ**

ಸಲಹಾ ಮಂಡಳಿ:
**ಶ್ರೀ ಬಿ.ಎಲ್.ಎನ್. ಹೆಗ್ಡೆ**
**ಶ್ರೀ ಎ. ಗಿರೀಶ್ ರೈ**
**ಶ್ರೀ ಎಂ. ರತ್ನಾಕರ್ ಶೆಟ್ಟಿ**
**ಶ್ರೀ ಸಂತೋಷ್ ಶೆಟ್ಟಿ**

ಸಂಪಾದಕ ಮಂಡಳಿ:
**ಶ್ರೀ ಎನ್. ಗೋಪಾಲ ಶೆಟ್ಟಿ**
**ಶ್ರೀ ಚಂದ್ರಶೇಖರ್ ಆಳ್ವ**
**ಶ್ರೀ ಪ್ರಕಾಶ್ ಶೆಟ್ಟಿ. ಎಂ**
**ಶ್ರೀಮತಿ ರಾಜಶ್ರೀ. ಕೆ. ಶೆಟ್ಟಿ**

ಪೋಷಕ ಸದಸ್ಯರು:
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು
**ಸಂತೋಷ್ ಶೆಟ್ಟಿ. ಜೆ**

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

**–ಸಂಪಾದಕ**

## ಒಳ ಪುಟಗಳಲ್ಲಿ...

| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌ॥ ಕಾರ್ಯದರ್ಶಿ ವರದಿ | 4 |
| 4. | BSRNSV I PUC Inauguration and Felicitation of the Toppers | 6 |
| 5. | Bunts' Sangha RNS Composite P.U. College Investiture Ceremony-2017 | 7 |
| 6. | ಇವರು ನಮ್ಮವರು – ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ | 8 |
| 7. | ರಸ್ತೆಗೆ ಮೂಲ್ಕಿ ಸುಂದರರಾಮ್ ಶೆಟ್ಟಿಯವರ ಹೆಸರಿಡುವುದರಲ್ಲಿಯೂ ರಾಜಕೀಯವೇ? | 10 |
| 8. | Seventy Years of Freedom and Partition | 12 |
| 9. | Indian MIG | 17 |
| 10. | ಅಪ್ಪೆ–ಅಮ್ಮೆ – ಮಮ್ಮಿ–ಡ್ಯಾಡಿ | 19 |
| 11. | Matrimonial Services | 42 |

**ಮುಖಪುಟ**

**ಭಾವಪೂರ್ಣ ಶ್ರದ್ಧಾಂಜಲಿ :**
**ಡಾ॥ ಐ.ವಿ. ಶೆಟ್ಟಿ ಮತ್ತು ಪಿ.ವಿ. ಶೆಟ್ಟಿ**

**ಬಂಟ್ಸ್ ಸಂಘ ಆರ್.ಎನ್.ಎಸ್. ಸಂಯುಕ್ತ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ಪದಗ್ರಹಣ ಸಮಾರಂಭ**



# ಸಂಪಾದಕೀಯ

ಆಧುನಿಕತೆ ತೀವ್ರಗೊಳ್ಳುತ್ತಿದಂತೆ ನಮ್ಮ ಆಸೆಗಳ ತೀವ್ರತೆಯೂ ಹೆಚ್ಚುತ್ತಿದೆ. ನಮ್ಮ ಆರ್ಥಿಕ, ಸಾಮಾಜಿಕ ಸ್ಥಿತಿಗತಿ ಎಲ್ಲವನ್ನೂ ಮರೆತು ನಾವು ಶ್ರೀಮಂತರು ಎಂದು ಬಿಂಬಿಸಲು ಬಯಸುತ್ತಿದ್ದೇವೆ. ಹುಟ್ಟುಹಬ್ಬ, ನಾಮಕರಣ, ನಿಶ್ಚಿತಾರ್ಥ, ಮದುವೆ ಹೀಗೆ ಕಾರ್ಯಕ್ರಮಗಳು ಯಾವುದೇ ಇರಲಿ ಅದು ನಮ್ಮ ಊರಿನಲ್ಲಿ ಇದುವರೆಗೆ ನಡೆದುದಕ್ಕಿಂತ ಆಡಂಬರ ಪೂರ್ಣವಾಗಿರಬೇಕು, ನಾವು ಮಾಡುತ್ತಿರುವುದೆಲ್ಲಾ ನಮಗಾಗಿ ಅಲ್ಲ; ನಮ್ಮ ಸ್ಥಾನಮಾನ ಹಾಗೂ ಪ್ರತಿಷ್ಠೆಗಾಗಿ ಎಂದು ಪರಸ್ಪರ ಪೈಪೋಟಿಯಿಂದ ಖರ್ಚು ಮಾಡುತ್ತಿದ್ದೇವೆ. ಮದುವೆ ತೀರಾ ವೈಯುಕ್ತಿಕ ವಿಚಾರ. ತಮ್ಮ ಮಕ್ಕಳ ಮದುವೆಯನ್ನು ತಮಗೆ ಬೇಕಾದಂತೆ ತಮ್ಮ ಸಾಮಾರ್ಥ್ಯಕ್ಕೆ ತಕ್ಕಂತೆ ಮಾಡುವ ಸ್ವಾತಂತ್ರ್ಯ ಎಲ್ಲರಿಗೂ ಇದೆ. ಆದರೆ ಮದುವೆಯ ಮುಖ್ಯ ಧಾರ್ಮಿಕ ಪ್ರಕ್ರಿಯೆಗಳು ತಮ್ಮ ಪಾರಂಪರಿಕ ಮೌಲ್ಯಗಳನ್ನು ಕಳೆದುಕೊಂಡು ಅವುಗಳ ಸ್ಥಾನವನ್ನು ರಿಸಪ್ಷನ್, ಮೆಹಂದಿ, ಸಂಗೀತ, ವಿಡೀಯೊ ಶೂಟಿಂಗ್, ಭಾರಿ ಊಟಗಳೇ ಆಕ್ರಮಿಸಿಕೊಂಡಿದೆ. ಇವುಗಳೇ ಇಂದು ಸಮಾಜದ ಅಲಿಖಿತ ನಿಯಮವಾಗಿ ಎಲ್ಲರೂ ಕಣ್ಮುಚ್ಚಿ ಅನುಸರಿಸಬೇಕಾದ ಪರಿಸ್ಥಿತಿಗೆ ಸಿಲುಕಿರುವುದು ವಿಪರ್ಯಾಸವೇ ಸರಿ.

ದುಂದು ವೆಚ್ಚ ಮತ್ತು ಆಡಂಬರ, ವೈಭವಗಳ ಮೂಲಕ ತಮ್ಮ ಇರುವಿಕೆಯನ್ನು, ಸ್ಥಾನಮಾನವನ್ನು, ಅಂತಸ್ತನ್ನು ಹೊರಜಗತ್ತಿಗೆ ಸಾದರಪಡಿಸುವ ಸಿರಿವಂತರ ಅನುಕರಣೆ ಮಾಡಲು ಹೋಗಿ ಬಡವರು ಮತ್ತು ಮಧ್ಯಮ ವರ್ಗದವರು ಬಲಿಪಶುಗಳಾಗುತ್ತಿರುವುದು ಇಂದಿನ ವಾಸ್ತವ. ಒಣ ಪ್ರತಿಷ್ಠೆಗೆ ಜೋತು ಬೀಳದೆ ಇನ್ನೊಬ್ಬರ ಕಣ್ಣು ಕುಕ್ಕಿಸಲು ಏನೇನೋ ಕಸರತ್ತು ಮಾಡುವ ಬದಲು ನಮ್ಮ ಸಾಮಾರ್ಥ್ಯಕ್ಕನುಗುಣವಾಗಿ ನಮ್ಮ ಆತ್ಮಸಾಕ್ಷಿಗೆ ಮೋಸ ಮಾಡದೇ ಬದುಕುವುದು ಒಳಿತಲ್ಲವೇ?

ಸಂಘವು ತನ್ನ 60 ವರ್ಷಗಳನ್ನು ಪೂರೈಸುತ್ತಿರುವ ಈ ಸಂದರ್ಭದಲ್ಲಿ ಸಂಘದ ಪ್ರಮುಖ ಮೈಲಿಗಲ್ಲುಗಳನ್ನು ದಾಖಲೀಕರಣಗೊಳಿಸಿ ಯುವಪೀಳಿಗೆಗೆ ದಾಟಿಸುವ ನಿಟ್ಟಿನಲ್ಲಿ ಸಾಹಿತ್ಯ ಮತ್ತು ಪ್ರಕಾಶನ ಸಮಿತಿಯು ಕಾರ್ಯೋನ್ಮುಖವಾಗಿದೆ. ಸಂಘದ ಬೆಳವಣಿಗೆಯ ಪ್ರಮುಖ ಕಾಲಘಟ್ಟಗಳ ದೃಶ್ಯ, ಪೋಟೊ ಮುಂತಾದವುಗಳನ್ನು ಕ್ರೂಢೀಕರಿಸುವಲ್ಲಿ ಸದಸ್ಯರುಗಳ ಸಹಕಾರವನ್ನು ನಿರೀಕ್ಷಿಸುತ್ತಿದ್ದೇವೆ.


ಈ ಬಾರಿ ಸಂಘದ ಸರ್ವ ಸದಸ್ಯರ ಸಭೆಯು ಕ್ರಮಬದ್ಧವಾಗಿ ನಡೆದು ಆರೋಗ್ಯಕರ ಚರ್ಚೆಗೆ ವೇದಿಕೆಯಾಗಿರುವುದು ಒಂದು ಆಶಾದಾಯಕ ಬೆಳವಣಿಗೆಯೆಂದೇ ಹೇಳಬಹುದು. ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸುವಲ್ಲಿನ ಪ್ರಾಮಾಣಿಕತೆ ಮತ್ತು ನೈಜ ಕಾಳಜಿ ಮೆಚ್ಚುವಂತದ್ದು. ನೇರವಾದ ಅನುಭವ ಮತ್ತು ಪಾಂಡಿತ್ಯ ಇಲ್ಲವೆಂದ ಮಾತ್ರಕ್ಕೆ ಆರ್ಥಿಕ ಅಶಿಸ್ತನ್ನು ಒಪ್ಪಲಾಗದು. ಸಂಘದ ಪ್ರತಿಯೊಂದು ರೂಪಾಯಿಯೂ ಕೂಡ ನಿಯಮದ ಚೌಕಟ್ಟಿನಲ್ಲೇ ಬಳಸುವಂತೆ ನಿಗಾವಹಿಸುವುದು ನಮ್ಮ ಸ್ಥಾನದ ಜವಾಬ್ದಾರಿ. ನಮ್ಮ ಮುಂದಿನ ಅವಧಿಯು ಸಂಘದ ಬೆಳವಣಿಗೆಗೆ ಪೂರಕವಾಗುವ ಚಿಂತನೆಗೆ ಮಾತ್ರ ಸೀಮಿತವಾಗಿರಲಿ.

**ಎಲ್ಲರಿಗೂ ಶ್ರೀ ಕೃಷ್ಣ ಜನ್ಮಾಷ್ಟಮಿ, ಸ್ವಾತಂತ್ರ್ಯೋತ್ಸವ ಮತ್ತು ಗಣೇಶ ಚತುರ್ಥಿಯ ಶುಭಾಷಯಗಳು.**

ವಂದನೆಗಳೊಂದಿಗೆ,

**ರವಿರಾಜ್ ಎಸ್. ಶೆಟ್ಟಿ**
Email: ravidani6@gmail.com

ಸಂಪಾದಕೀಯ



# ಅಧ್ಯಕ್ಷರ ನುಡಿ

ಆತ್ಮೀಯ ಬಂಧುಗಳೇ,

ಜುಲೈ 30 ನಮ್ಮ ವಾರ್ಷಿಕ ಮಹಾಸಭೆ ಸಾಂದರ್ಭಿಕವಾಗಿ, ಔಚಿತ್ಯವಾಗಿ, ಕಾಲಕ್ರಮಕ್ಕನುಗುಣವಾಗಿ ನಡೆದು ಸಂಘದ ಘಟನಾವಳಿಗಳಿಗೆ ಹೊಸತನದ ಲೇಪವನ್ನು ನೀಡಿತು. ವಿಶೇಷವಾಗಿ ಮಾಜಿ ಅಧ್ಯಕ್ಷರುಗಳು, ಮಾಜಿ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿ ಮುಕ್ತ ಚರ್ಚೆಯಲ್ಲಿ ಸಂಘದ ಏಳಿಗೆಗೆ ಕ್ರಿಯಾ ಶೀಲತ್ವದ ಮುನ್ನಡೆಗೆ ಪ್ರಾಮುಖ್ಯತೆ ನೀಡಿ, ಸಹಕರಿಸಿದ ಎಲ್ಲಾ ಬಂಟ ಬಂಧುಗಳಿಗೆ ಮನದಾಳದಿಂದ ಅಭಿನಂದನೆಗಳನ್ನು ಪ್ರಥಮದಲ್ಲಿ ಸಲ್ಲಿಸುತ್ತಿದ್ದೇನೆ.

ಸದಸ್ಯರು ಸಂಘದ ಕಾರ್ಯಕ್ರಮಗಳಲ್ಲಿ, ಮಹಾಸಭೆಗಳಲ್ಲಿ ಹೆಚ್ಚು ಹೆಚ್ಚು ಭಾಗವಹಿಸಿದಾಗ ಮಾತ್ರ ಕ್ರಿಯಾಶೀಲತೆಯ ಹಣತೆಯನ್ನು ಹಚ್ಚಬಹುದು. ಸಂಘ ನಮ್ಮದು, ಅದರ ಹಿರಿತನ, ಗೌರವ ಅಲ್ಲದೆ ಆಸ್ತಿ ಪಾಸ್ತಿಗಳನ್ನು ಕಾಪಾಡುವುದು ನಮ್ಮ ಗುರುತರ ಜವಾಬ್ದಾರಿ. ಈ ನಿಟ್ಟಿನಲ್ಲಿ ನಮ್ಮ ಹಿರಿಯರಿಂದ ಬಂದ ಈ ಸತ್‌ಸಂಪ್ರದಾಯವನ್ನು ಸಾರ್ವಕಾಲಿಕ ಸತ್ಯದ ದೃಷ್ಟಿಯಿಂದ ಕಾರ್ಯೋನ್ಮುಖರಾಗಬೇಕಾಗುತ್ತದೆ. ನಮ್ಮ ಚಟುವಟಿಕೆಗಳಲ್ಲಿ ಭಾಗವಹಿಸದ ಸದಸ್ಯರು ಕೊನೇ ಪಕ್ಷ ಮಹಾಸಭೆಯಲ್ಲಾದರೂ ಬಂದು ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಬೇಕೆಂಬುದೇ ನಮ್ಮ ಆಶಯ.

ವರ್ಷದಿಂದ ವರ್ಷಕ್ಕೆ ಸಂಘದ ಹಿರಿಮೆ ಗರಿಮೆಗಳು ಕೀರ್ತಿ ಶಿಖರದ ಉತ್ತುಂಗಕ್ಕೆ ಏರಿ ನಮ್ಮೆಲ್ಲರ ಜವಾಬ್ದಾರಿಯನ್ನು ಹೆಚ್ಚಿಸುತ್ತಿದೆ. ಸದಸ್ಯರ ಸಹಕಾರ, ಪ್ರೀತಿ, ವಿಶ್ವಾಸಗಳ ಸೆಲೆಯಲ್ಲಿ ನಮ್ಮ ನೆಲೆ.

ಸ್ನೇಹಿತರೆ, ಶೈಕ್ಷಣಿಕವಾಗಿ ಬಂಟರ ಸಂಘ ಬಹಳಷ್ಟು ಮುಂಚೂಣಿಯಲ್ಲಿದೆ. ನಮ್ಮ ಇಂದಿನ ವ್ಯವಸ್ಥೆಯಲ್ಲಿ ಸ್ಥಳಾವಕಾಶದ ಕೊರತೆಯನ್ನು ಸಹ ನಾವು ಎದುರಿಸುತ್ತಿದ್ದೇವೆ. ನಿಮಗೆ ಒಂದು ಕಿರು ವಿಚಾರವನ್ನು, ಅತ್ಯಂತ ಸಂತೋಷವನ್ನುಂಟು ಮಾಡುವ ಸತ್ಯ ಸಂಗತಿ ನಿಮ್ಮ ಮುಂದಿಡಲು ಬಯಸುತ್ತೇನೆ. ನಮ್ಮ ಸಂಘದ ಕಛೇರಿಯ ಸಹಾಯಕಿಯೋರ್ವಳ ಮಗ ನಮ್ಮ ಶಾಲೆಯಲ್ಲಿಯೇ ಓದಿ ಈ ಬಾರಿ neet ಪರೀಕ್ಷೆಯಲ್ಲಿ ಎಂಬಿಬಿಎಸ್ ಕೋರ್ಸ್‌ಗೆ ಪ್ರವೇಶ ಪಡೆದಿದ್ದಾನೆ. ಕಟ್ಟ ಕಡೆಯ ವ್ಯಕ್ತಿಯೂ ಈ ಬಂಟರ ಸಂಘದ ಆಶ್ರಯದಿಂದ ಅಭಿವೃದ್ಧಿ ಪಥಕ್ಕೆ ಸಾಗಬಹುದು ಎನ್ನುವುದಕ್ಕೆ ಇದೊಂದು ನಿದರ್ಶನ. ಇಂತಹ ಹಲವಾರು ನಿದರ್ಶನಗಳು ನಮ್ಮ ಮುಂದೆ ಕಾಣ ಸಿಗುತ್ತದೆ.
ಕನಸುಗಳು ಹಲವಾರು, ಕಂಡ ಕನಸುಗಳು ನನಸಾಗಬೇಕಿದ್ದರೆ, ಸಾಕಷ್ಟು ಪರಿಶ್ರಮ ಜೊತೆಗೆ ಸಮಯ ಹಾಗೂ ಸಂಯಮದ ಅಗತ್ಯವಿದೆ. ಕರ್ಮಣ್ಯೇವಾಧಿಕಾರಸ್ತೆ ಮಾಫಲೇಶು ಕದಾಚನ. ಕರ್ಮ ಮಾಡೋಣ, ಪ್ರತಿ ಫಲ ಸಿಗಬಹುದೆಂಬ ಆಶಯ ನಮ್ಮದು.

ನಮ್ಮ ಯೋಜನೆಗಳು ಸಮಸ್ಯೆ ಎಂಬ ಸುಳಿಗೆ ಸಿಲುಕಿ ಹೊರಬರಲು ಪ್ರಯತ್ನಿಸುತ್ತಿರುವ ವಿಚಾರ ನಿಮಗೆಲ್ಲ ತಿಳಿದಿದೆ. ಈ ಬಾರಿ ವಿಶೇಷ ಮಹಾಸಭೆ ಕರೆದು ರಚನಾತ್ಮಕ, ನೈಜ ವಿಚಾರಗಳತ್ತ ಗಮನ ಹರಿಸಿರುತ್ತೇವೆ. ಕಳೆದ ತಿಂಗಳಿನಲ್ಲಿ ನಡೆದ ಮಹಾಸಭೆ ಕೂಡಾ ಶೀಘ್ರವಾಗಿ ಅಭಿವೃದ್ಧಿ ಯೋಜನೆಗಳತ್ತ ಕಾರ್ಯಪ್ರವೃತ್ತವಾಗಬೇಕೆಂದು ಸಲಹೆ ನೀಡಿದೆ. ಈ ನಿಟ್ಟಿನಲ್ಲಿ ನಾವು ಕಾರ್ಯೋನ್ಮುಖರಾಗಲಿದ್ದೇವೆ.
ನಮ್ಮೆಲ್ಲರ ಹಿರಿಯರೂ, ಬಂಟರ ಸಂಘದ ಅಧ್ಯಕ್ಷ ಪೀಠವನ್ನು ಅಲಂಕರಿಸಿದ, ಕೃಷಿಕರು, ವೃತ್ತಿಯಲ್ಲಿ ವೈದ್ಯರು, ಉದ್ಯಮಿಗಳು, ಉದಾರ ದಾನಿಗಳೂ ಆದ ಡಾ॥ ಐ. ವಿ. ಶೆಟ್ಟಿಯವರು ಬದುಕಿನ ದೀರ್ಘ ಪಯಣವನ್ನು ಮುಗಿಸಿದ್ದಾರೆ. ಬೆಂಗಳೂರು ಬಂಟರ ಸಮಾಜದ ಬೆಳವಣಿಗೆಗೆ ಆರಂಭಿಕ ದಿನಗಳಲ್ಲಿ ನೀರೆರೆದು ಪೋಷಿಸಿದ ಅಗ್ರಪಂಕ್ತಿಯ ದಾನಿಗಳಲ್ಲಿ ಶೆಟ್ಟರು ಎದ್ದು ಕಾಣ ಸಿಗುತ್ತಾರೆ.

ವಿಜಯ ಪತ್ತಿನ ಸೌಹಾರ್ದ ಸಹಕಾರಿಯ ಸಂಸ್ಥಾಪಕರೂ ಆದ ಶೆಟ್ಟಿಯವರು ಓರ್ವ ಸರಳ ಸಜ್ಜನಿಕೆಯ ಸಾಕಾರ ಮೂರ್ತಿ. ಹಿಂದಿನ ತಲೆಮಾರಿನ ಒಂದು ಆಧಾರ ಸ್ತಂಭ ಕುಸಿದು, ನಮಗೆಲ್ಲಾ ಅತೀವ ದುಃಖವನ್ನುಂಟುಮಾಡಿದೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂಬುದೇ ಬೆಂಗಳೂರು ಬಂಟ ಬಂಧುಗಳ ಆಶಯ.

ಉದ್ಯಮಿ ಬೆಂಗಳೂರು ಬಂಟರ ಸಂಘಕ್ಕೆ ಕೊಡುಗೈ ದಾನ ನೀಡಿ ಪೋಷಿಸಿದ ಶ್ರೀ ಪಿ.ವಿ ಶೆಟ್ಟಿಯವರು ನಮ್ಮನ್ನಗಲಿದ್ದಾರೆ. ಪಿ.ವಿ ಶೆಟ್ಟಿಯವರು ಓರ್ವ ಉದ್ಯಮಿ, ಶ್ರೇಷ್ಠ ಆಡಳಿತಗಾರ, Turf Club, ಪ್ರತಿಷ್ಠಿತ ಬೆಂಗಳೂರು ಕ್ಲಬ್ ಅಧ್ಯಕ್ಷರಾಗಿ, ಪ್ರಭಾವಿ ವ್ಯಕ್ತಿಯಾಗಿ, ಅಜಾನುಬಾಹು ವ್ಯಕ್ತಿತ್ವದ ಶೆಟ್ಟರು, ಇತ್ತೀಚೆಗೆ ಬಂಟರ ಸಂಘ ಬಂಟ್ವಾಳದ ನೂತನ ಕಟ್ಟಡಕ್ಕೆ 2 ಕೋಟಿ ದೇಣಿಗೆ ನೀಡಿ ತನ್ನ ಹುಟ್ಟೂರಿನಲ್ಲಿ ಹೊಸತನದ ಹುಡುಕಾಟಕ್ಕೆ ನಾಂದಿ ಹಾಡಿದ ಮಹನೀಯರು. ಅಳಿಯುವುದೇ ಕಾಯ; ಉಳಿಯುವುದೇ ಕೀರ್ತಿ. ನಮ್ಮೆಲ್ಲ ಬಂಟ ಬಂಧುಗಳ ಪರವಾಗಿ ಶೆಟ್ಟರಿಗೆ ಭಾವ ಪೂರ್ಣ ಶ್ರದ್ಧಾಂಜಲಿ.

ಬಂಧುಗಳೇ ಸ್ವಾತಂತ್ರ್ಯೋತ್ಸವದ ಜೊತೆಗೆ, ಸಾಲು ಸಾಲು ಹಬ್ಬಗಳು ಪ್ರಾರಂಭವಾಗುತ್ತದೆ. ಬಂಟ ಬಂಧುಗಳ ಮನೆ ಮನಗಳಲ್ಲಿ ಶಾಂತಿ, ಸಮಾಧಾನ, ಸೌಹಾರ್ದದ ವಾತಾವರಣದೊಂದಿಗೆ ಆನಂದಮಯ ಜೀವನ ನಿಮ್ಮದಾಗಲಿ ಎಂಬ ಹರಕೆ ಹಾರೈಕೆಯೊಂದಿಗೆ,

ನಿಮ್ಮ ಸೇವಾಕಾಂಕ್ಷಿ

**ಚಂದ್ರಹಾಸ ರೈ ಡಿ.**

ಅಧ್ಯಕ್ಷರು



# ಗೌರವ ಕಾರ್ಯದರ್ಶಿಗಳ ವರದಿ

ಗೌ|| ಕಾರ್ಯದರ್ಶಿ ವರದಿ

ಗೌರವಾನ್ವಿತ ಸದಸ್ಯರೇ,

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲೆ ಹಾಗೂ ಪದವಿ ವಿದ್ಯಾರ್ಥಿಗಳ ಪದಗ್ರಹಣ ಕಾರ್ಯಕ್ರಮವನ್ನು ದಿನಾಂಕ 21.07.2017ರಂದು ಸಂಘದ ಆರ್.ಟಿ.ಬಿ. ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ವಾಗ್ಮಿ ಶ್ರೀ ನಿಕೇತ್‌ರಾಜ್‌ರವರು ವಿದ್ಯಾರ್ಥಿಗಳನ್ನುದ್ದೇಶಿಸಿ ಹಿತನುಡಿಗಳನ್ನಾಡಿದರು.

ನಮ್ಮ ಸಮಿತಿಯು ಆಡಳಿತ ಚುಕ್ಕಾಣಿ ಹಿಡಿದು ಇದೀಗ ಒಂದು ವರ್ಷ ಪೂರೈಸಿದೆ. ಸಂಘದ ಆಡಳಿತವನ್ನು ಅತ್ಯಂತ ಪಾರದರ್ಶಕವಾಗಿ ಹಾಗೂ ದಕ್ಷತೆಯಿಂದ ಮುನ್ನಡೆಸುವಲ್ಲಿ ನಮ್ಮ ಸಮಿತಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದೆ. ಸಂಘದ ವಾರ್ಷಿಕ ಮಹಾಸಭೆಯು ದಿನಾಂಕ 30.07.2017 ರಂದು ನಡೆದು, ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸಂಘದ ಆಗು–ಹೋಗುಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಸಂಘದ ಅಭಿವೃದ್ಧಿಗೆ ಸೂಕ್ತ ಸಲಹೆ –ಸೂಚನೆ ಹಾಗೂ ಮಾರ್ಗದರ್ಶನ ನೀಡಿರುವುದಕ್ಕಾಗಿ ವಂದನೆಗಳು.

ಮುಂದಿನ ಒಂದು ವರ್ಷದ ಅವಧಿಯಲ್ಲಿ, ಸಂಘವು ಯಲಚಗುಪ್ಪೆಯಲ್ಲಿ ಖರೀದಿಸಿದ ಜಮೀನಿನ ಎಲ್ಲಾ ಕಾನೂನು ತೊಡಕುಗಳನ್ನು ಪರಿಹರಿಸುವುದರೊಂದಿಗೆ, ಕಂದಾಯ ಪಾವತಿ, ಸಂಘದ ಹೆಸರಿಗೆ ಖಾತಾ ಬದಲಾವಣೆ, ಕಂಪೌಂಡ್ ನಿರ್ಮಾಣ, ಭವಿಷ್ಯದಲ್ಲಿ ಕೈಗೊಳ್ಳಬಹುದಾದ ಶೈಕ್ಷಣಿಕ ಅಭಿವೃದ್ಧಿ ಕಾರ್ಯಗಳ ಬಗ್ಗೆ ತಜ್ಞರ ವರದಿಯ ಆಧಾರದ ಮೇಲೆ ಮಾಸ್ಟರ್ ಪ್ಲಾನ್ ತಯಾರಿಸುವುದು ನಮ್ಮ ಮುಂದಿರುವ ಗುರಿ. ಇದರೊಂದಿಗೆ ವಿಶೇಷ ಮಹಾಸಭೆಯ ತೀರ್ಮಾನದಂತೆ 3–4 ಎಕರೆ ಪ್ರದೇಶದಲ್ಲಿ ಹಿರಿಯ ನಾಗರಿಕರ ಸೇವಾ ಕೇಂದ್ರ ಸ್ಥಾಪಿಸುವ ನಿಟ್ಟಿನಲ್ಲಿ ಮುಂದುವರಿಯಲಿದ್ದೇವೆ.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ಗುಣಮಟ್ಟದ ಸ್ಥಿರತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಹಾಗೂ ತುರ್ತು ಬೇಡಿಕೆಗಳನ್ನು ಕಾಲಮಿತಿಯೊಳಗೆ ಪೂರೈಸುವಲ್ಲಿ ಶಾಲಾಡಳಿತ ಮಂಡಳಿ ಸಭೆಯ ಸಲಹೆ ಪಡೆದು ಕಾರ್ಯ ಪ್ರವೃತ್ತರಾಗಲಿದ್ದೇವೆ.

ಈ ಎಲ್ಲಾ ಪರಿಶ್ರಮಗಳಿಗೆ ಸಂಘದ ಹಾಗೂ ಸಮಾಜದ ಹಿರಿಯರ ಮಾರ್ಗದರ್ಶನ ಹಾಗೂ ಯುವ ಮಿತ್ರರ ಬೆಂಬಲ ಅತೀ ಅಗತ್ಯ. ಆದ್ದರಿಂದ ಸಂಘವನ್ನು ಹೊರತು ಪಡಿಸಿ ಇತರ ವೇದಿಕೆಗಳಲ್ಲಿ ಸಂಘದ ಬಗ್ಗೆ ಅನಗತ್ಯ ಚರ್ಚೆ ಹಾಗೂ ಸುಳ್ಳು ಆರೋಪ ಮಾಡುವವರು ಹಾಗೂ ಸಂಘದ ಚುನಾವಣೆಯೊಂದೇ ತಮ್ಮ ಧ್ಯೇಯೋದ್ದೇಶ ಎಂದು ತಿಳಿದುಕೊಂಡವರು ಇನ್ನಾದರೂ ಆತ್ಮಾವಲೋಕನ ಮಾಡಿಕೊಂಡು ಸಂಘದ ಅಭಿವೃದ್ಧಿಗೆ ಕೈಜೋಡಿಸಬೇಕೆನ್ನುವುದೇ ನಮ್ಮ ಆಶಯ.

ದಿನಾಂಕ 25.08.2017, ಶುಕ್ರವಾರದಂದು ನಡೆಯಲಿರುವ ಗಣೇಶ ಚತುರ್ಥಿ ಆಚರಣೆಗೆ ತಾವೆಲ್ಲರೂ ಭಾಗವಹಿಸಿ ಶ್ರೀ ವರಸಿದ್ಧಿವಿನಾಯಕನ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿ.

**ಸಂತೋಷ್ ಶೆಟ್ಟಿ ಜೆ.**
ಗೌರವ ಕಾರ್ಯದರ್ಶಿ

# ಬಂಟರ ಸಂಘ ಬೆಂಗಳೂರು
# ಮತ್ತು ಚಿನ್ಮಯ ಮಿಷನ್ ಸಂಯುಕ್ತ ಆಶ್ರಯದಲ್ಲಿ 'ಗೀತಾಜ್ಞಾನ ಯಜ್ಞ'



ಅಧ್ಯಕ್ಷರಿಂದ ಕಾರ್ಯಕ್ರಮಕ್ಕೆ ಚಾಲನೆ ಮತ್ತು ಪರಮಪೂಜ್ಯ ಸ್ವಾಮಿ ಬ್ರಹ್ಮಾನಂದರವರಿಂದ ಪ್ರವಚನ ನಡೆಯಿತು.



ಚಂದ್ರಾಲೇಔಟ್ ವ್ಯಾಪ್ತಿಯ 'ಪೋಲಿಸ್ ಜನಸ್ನೇಹಿ' ಸಭೆಯನ್ನು
ಶ್ರೀ ಅನುಚೇತ್, ಡಿ.ಸಿ.ಪಿ. ಪಶ್ಚಿಮ ವಲಯ ಇವರು ಉದ್ಘಾಟಿಸಿದರು.

### BUNT'S RNS VIDYANIKETAN

## I PUC INAUGURATION AND FELICITATION OF THE TOPPERS





Bunts' Sangha RNS Vidyaniketan and Composite PU College witnessed its maiden occasion for the academic year 2017-18, on 14th June, 2017, which made everyone jubiliant and exalted.

The saying, "Success doesn't just come and find you. You have to go out and get it", aptly suits the students of our institution. Bunts' Sangha RNS Composite PU College felicitated the deserving students of 2nd PUC with mementos, certificates and cash prizes.

437 students appeared for the 2nd PUC Board Exams with a wonderful result of 95%. The students made us proud by securing 33 centums, 100 distinctions and 268 first class. 84 students were awarded mementos and certificates to encourage them and motivate them to perform much better in their future pursuits.

The 'eye-catcher' moment for the day was the management's decision to felicitate the State rank holders with cash prize. Ms. Sreenidhi P.G, the Ist rank holder in the State in Commerce stream was awarded with the cash prize of Rs. 25,000/- and Master Sumukh Bhoopalam in Science stream was awarded with the cash prize of Rs.15,000/-.

It was a 'picture-perfect' decision when the felicitation was combined with the inaugurals of Ist PU Students. The freshers got a bird's eye-view of the institution and its functioning. They were given a hope and encouragement by the management that the institution will always motivate the talented students to streamline their goals.

## ನೀವೂ ಬರೆಯಿರಿ!

ಉದಯೋನ್ಮುಖ ಹಾಗೂ ಯುವ ಬರಹಗಾರರಿಂದ ಕಥೆ–ಕವನ, ಲೇಖನ, ಹಾಸ್ಯಬರಹ, ಚುಟುಕುಗಳನ್ನು ಆಹ್ವಾನಿಸುತ್ತಿದ್ದೇವೆ. ತಮ್ಮ ಬರಹಗಳನ್ನು 'ಸ್ನೇಹಚಿಂತನ'ದ ಸಂಪಾದಕರಿಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಟೈಪ್ ಮಾಡಿ (ಒಂದು ಪುಟಕ್ಕೆ ಮೀರದಂತೆ) ಸಂಘದ ಇಮೈಲ್: **info@buntsanghablr.com** ಗೆ ಅಥವಾ ಮುದ್ರಿಸಿ ಸಂಘದ ಕಛೇರಿಗೆ ಪ್ರತೀ ತಿಂಗಳ 20ನೇ ತಾರೀಕಿನ ಒಳಗಾಗಿ ಕಳುಹಿಸಬಹುದಾಗಿದೆ.

**BUNTS' SANGHA RNS COMPOSITE P.U. COLLEGE**

# INVESTITURE CEREMONY - 2017





Bunts' Sangha RNS Vidyaniketan and P.U College witnessed a meritorious occasion on 21st July, 2017, the much coveted Investiture Ceremony, 2017-18.

The well deserved students' representatives of school and college wing were bestowed with badges. Hrishikesh.E was made the head boy and A.Sonali Monnappa was made the head girl from college, for this academic year. Pavan S murthy was made the School head boy and Rakshitha.R was made the School head girl.

The Chief Guest for the day was Sri Niketh Raj, Yuva Bharath Icon. Sri Chandrahas Rai, President of Bunts' Sangha, Sri Santosh Shetty.J Secretary of Bunts' Sangha, Sri Anandram Shetty, Treasurer of Bunts' Sangha and Mrs. Anju Naik Vice-Principal of Bunts' Sangha persided over the ceremony.

The programme began with an invocation song by school choir group followed by lighting of the lamp.

After the welcome address, the student leaders were adorned with the badges. A solemn oath was administred by the Vice-Principal. The leaders made a promise that they will always adhere and uphold the dignity and decorum of the institution.

The college head boy gave his acceptance speech and assured that he would always strive for the betterment of the institution.

Sri Niketh Raj spoke extensively about the qualities, a leader should possess. He also stressed on discipline, which must be inculcated in every individual from the grass root level.

Sri Chandrahas Rai, President, Bunts' Sangha addressed the audience. He re-iterated the importance of sports along side the academics.

After the vote of thanks, National Anthem was sung by Choir group which brought a formal end for the day's activities.

ಇವರು ನಮ್ಮವರು

## ಕಾನೂನು ರಂಗದ ಅನರ್ಘ್ಯ ರತ್ನ

# ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ



**ಕರ್ನಾಟಕ ಲೋಕಾಯುಕ್ತರಾದ ನ್ಯಾಯಮೂರ್ತಿ ಪೆರೋಡಿ ವಿಶ್ವನಾಥ್ ಶೆಟ್ಟಿ, ಹಳ್ಳಿಯಲ್ಲಿ ಹುಟ್ಟಿ ಡೆಲ್ಲಿವರೆಗೂ ಬೆಳೆದ ಬಂಟ ಸಮಾಜದ ಹೆಮ್ಮೆಯ ಪುತ್ರ. ಹೈಕೋರ್ಟ್ ನ್ಯಾಯ ಮೂರ್ತಿಯಾಗಿ, ಸುಪ್ರೀಂಕೋರ್ಟ್ ವಕೀಲರಾಗಿ ಬಡವರಿಗೆ ನ್ಯಾಯ ದೊರಕಿಸಿಕೊಡುವ ಕಾರ್ಯಕ್ಕೆ ಜೀವನವನ್ನೇ ಮುಡಿಪಾಗಿಟ್ಟವರು. ಇದೀಗ ಭ್ರಷ್ಟಾಚಾರ ನಿಗ್ರಹದ ಜವಾಬ್ದಾರಿ ಹೊಂದಿದ ಲೋಕಾಯುಕ್ತ ಹುದ್ದೆ ಇವರ ನಿಷ್ಪಕ್ಷಪಾತ ಧೋರಣೆ, ದಕ್ಷತೆ, ಪ್ರಾಮಾಣಿಕತೆಯನ್ನು ಹುಡುಕಿಕೊಂಡು ಬಂದಿರುವುದು ಅವರ ಕಾರ್ಯವೈಖರಿಗೆ ಹಿಡಿದ ಕನ್ನಡಿ.**

ಉಪ್ಪೂರು ಕೃಷ್ಣಯ್ಯ ಶೆಟ್ಟಿ ಹಾಗೂ ಪೆರೋಡಿ ಕಲ್ಯಾಣಿ ಶೆಡ್ತಿಯವರ ಮಗನಾಗಿ 1944ರ ಮೇ 2ರಂದು ಹುಟ್ಟಿದ ವಿಶ್ವನಾಥ ಶೆಟ್ಟಿಯವರು ಶಕುಂತಲಾ ವಿ.ಶೆಟ್ಟಿಯವರನ್ನು ವಿವಾಹವಾಗಿ ಪುತ್ರಿ ಹಾಗೂ ಇಬ್ಬರು ಪುತ್ರರೊಂದಿಗೆ ಸಂಸಾರ ಸಾಗಿಸುತ್ತಿದ್ದಾರೆ. ಹಿರಿಯ ಪುತ್ರ ಡಾ.ಕೆ.ರವಿಶಂಕರ್ ಶೆಟ್ಟಿ, ಎಂ.ಎಸ್.ರಾಮಯ್ಯ ನಾರಾಯಣ ಹೃದಯಾಲಯದಲ್ಲಿ ಹೃದ್ರೋಗ ತಜ್ಞರಾಗಿ ಸೇವೆ ಸಲ್ಲಿಸುತ್ತಿದ್ದು, ಮತ್ತೊಬ್ಬ ಮಗ ಕೆ.ಶಶಿಕಿರಣ್ ಶೆಟ್ಟಿ, ಹೈಕೋರ್ಟ್ ವಕೀಲರಾಗಿ, ಪುತ್ರಿ ದೀಪಿಕಾ ಶೆಟ್ಟಿ ಕೂಡಾ ಅದೇ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇಬ್ಬರೂ ತಂದೆಯ ವೃತ್ತಿಯನ್ನೇ ಆಯ್ದುಕೊಂಡಿರುವುದು ವಿಶೇಷ.

ಬಾಲ್ಯದಿಂದಲೂ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ವಿಶಿಷ್ಟ ಸಾಧನೆ ಮಾಡಿದ ಇವರು, ಕೊಳಲಗಿರಿಯ ಪ್ರಾಥಮಿಕ ಶಾಲೆ, ಸಂತ ಮೇರಿ ಹೈಯರ್ ಎಲಿಮೆಂಟರಿ ಶಾಲೆ, ಉಡುಪಿಯ ಬೋರ್ಡ್ ಹೈಸ್ಕೂಲ್, ಉಡುಪಿ ಕಾನೂನು ಕಾಲೇಜಿನಲ್ಲಿ ಶಿಕ್ಷಣ ಪಡೆದರು. ವಿದ್ಯಾರ್ಥಿ ದೆಸೆಯಿಂದಲೇ ನಾಯಕತ್ವ ಗುಣ ಹೊಂದಿದ್ದ ಶೆಟ್ಟರು, ಉಡುಪಿ ಕಾನೂನು ಕಾಲೇಜು ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದರು. ಇದಕ್ಕೂ ಮುನ್ನ ಬೋರ್ಡ್ ಹೈಸ್ಕೂಲ್ ಎಸ್‌ಪಿಎಲ್ ಆಗಿ, ಎಂಜಿಎಂ ಕಾಲೇಜು ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ಎನ್‌ಸಿಸಿಯಲ್ಲೂ ಕಂಪನಿ ಸಾರ್ಜಂಟ್ ಮೇಜರ್ ಆಗಿ ಕಾರ್ಯ ನಿರ್ವಹಿಸಿದ್ದರು.

### ವೃತ್ತಿ ಬದುಕು

1965ರಲ್ಲಿ ಕರ್ನಾಟಕ ಹೈಕೋರ್ಟ್‌ನ ಅಡ್ವೊಕೇಟ್ ಜನರಲ್ ಆಗಿದ್ದ ತುಂಬೆ ಕೃಷ್ಣರಾವ್ ಅವರ ಕಚೇರಿಯಲ್ಲಿ ಅಪ್ರೆಂಟಿಸ್‌ಶಿಪ್‌ಗೆ ಸೇರುವ ಮೂಲಕ ವೃತ್ತಿರಂಗಕ್ಕೆ ಪದಾರ್ಪಣೆ ಮಾಡಿದ ಶೆಟ್ಟಿಯವರು, 1966ರಲ್ಲಿ ಅಧಿಕೃತವಾಗಿ ಕಿರಿಯ ವಕೀಲರಾಗಿ ಸೇವೆ ಆರಂಭಿಸಿದರು. 1971ರವರೆಗೂ ಅದೇ ಕಚೇರಿಯಲ್ಲಿ ಮುಂದುವರಿದರು.

1971ರಲ್ಲಿ ಶೆಟ್ಟಿ ಅಂಡ್ ಹೆಗ್ಡೆ ಅಸೋಸಿಯೇಟ್ಸ್ ಆರಂಭಿಸಿ, ಕ್ರಿಮಿನಲ್, ಸಿವಿಲ್, ಸೇವೆ, ಶಿಕ್ಷಣ ಹಾಗೂ ಸಂವಿಧಾನ ಕಾನೂನು ಕೃತಿಗಳ ದೊಡ್ಡ ಸಂಗ್ರಹವನ್ನು ಸಂಪಾದಿಸಿದರು. 19-20 ಮಂದಿ ಕಿರಿಯ ವಕೀಲರು ಇವರ ಚೇಂಬರ್‌ನಲ್ಲಿ ಕೆಲಸ ಮಾಡುತ್ತಿದ್ದರು. 1971ರಿಂದ 78ರವರೆಗೆ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು. ನಾಲ್ಕು ಬಾರಿ ಕರ್ನಾಟಕ ವಕೀಲರ ಸಂಘದ ಸದಸ್ಯರಾಗಿ ಆಯ್ಕೆಯಾದರು. 1982ರಿಂದ 1987ರವರೆಗೆ ನಿರಂತರವಾಗಿ ಅಖಿಲ ಭಾರತ ವಕೀಲರ ಪರಿಷತ್‌ನಲ್ಲಿ ಕರ್ನಾಟಕವನ್ನು

ಪ್ರತಿನಿಧಿಸಿದ ಹೆಗ್ಗಳಿಕೆ ಇವರದ್ದು. ತಮ್ಮ ಅಧಿಕಾರಾವಧಿಯಲ್ಲಿ ವಕೀಲರ ಪರಿಷತ್ತಿನ ಕಾನೂನು ಶಿಕ್ಷಣ ಕಾರ್ಯಕ್ರಮವನ್ನು ಯಶಸ್ವಿಯಾಗಿ ಇವರು ನಿಭಾಯಿಸಿದರು.

ರಾಜ್ಯ ವಕೀಲರ ಸಂಘದ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಯುವವಕೀಲರಿಗಾಗಿ ಕಾನೂನು ಶಿಕ್ಷಣ ತರಬೇತಿ ಶಿಬಿರವನ್ನು ಆಯೋಜಿಸಿ, ದೇಶದ ಅತ್ಯುನ್ನತ ವಕೀಲರನ್ನು ಕರೆಸಿ, ಮಾರ್ಗದರ್ಶನ ನೀಡಿದರು. ರಾಷ್ಟ್ರೀಯ ಕಾನೂನು ಶಾಲೆಯ ಶೈಕ್ಷಣಿಕ ಮಂಡಳಿ ಸದಸ್ಯರಾಗಿಯೂ ಸೇವೆ ಸಲ್ಲಿಸಿದರು. ಕರ್ನಾಟಕ ಕಾನೂನು ವರದಿಗಾರಿಕೆ ಮಂಡಳಿಯ ಸದಸ್ಯರಾಗಿ 1987ರಲ್ಲಿ ನೇಮಕಗೊಂಡ ಇವರು, ಭಾರತದ ಪತ್ರಿಕಾ ಮಂಡಳಿ ಸದಸ್ಯರಾಗಿಯೂ ನಿಯುಕ್ತರಾದರು. ದೇಶ ವಿದೇಶಗಳಲ್ಲಿ ನಡೆದ ಹಲವು ಕಾನೂನು ಶಿಕ್ಷಣ ಕಾರ್ಯಾಗಾರಗಳಲ್ಲಿ ಭಾಗವಹಿಸಿ ಅಪಾರ ಜ್ಞಾನ ಸಂಪಾದಿಸಿದರು.

1993ರಲ್ಲಿ ಕರ್ನಾಟಕ ಹೈಕೋರ್ಟ್‌ನ ಹಿರಿಯ ವಕೀಲರಾಗಿ ನಿಯುಕ್ತಿಗೊಂಡ ಶೆಟ್ಟರು, 1995ರ ಫೆಬ್ರವರಿಯಲ್ಲಿ ಭಾರತದ ವಕೀಲರ ಪರಿಷತ್ ಸದಸ್ಯರಾಗಿ ಅವಿರೋಧ ಆಯ್ಕೆಯಾದರು. ಅದೇ ವರ್ಷದ ಡಿಸೆಂಬರ್‌ನಲ್ಲಿ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡರು. 1995ರಲ್ಲಿ ಅಮೆರಿಕ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಲಿಯಂ ರಾಂಕಿಸ್ಟ್ ಅವರ ಆಹ್ವಾನದ ಮೇರೆಗೆ ಅಮೆರಿಕಕ್ಕೆ ಅಧ್ಯಯನ ಪ್ರವಾಸ ಕೈಗೊಂಡ, ಮುಖ್ಯ ನ್ಯಾಯಮೂರ್ತಿ ಎ.ಎಂ.ಅಹ್ಮದಿ ನೇತೃತ್ವದ ನಿಯೋಗದಲ್ಲಿ ವಿಶ್ವನಾಥ ಶೆಟ್ಟಿ ಅವರೂ ಇದ್ದರು.

## ನ್ಯಾಯಮೂರ್ತಿಯಾಗಿ

1995ರ ಡಿಸೆಂಬರ್ 18ರಿಂದ 2006ರ ಮೇ 2ರವರೆಗೆ ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದರು. ಕರ್ನಾಟಕ ನ್ಯಾಯಾಂಗ ಅಕಾಡೆಮಿಯ ಸಂಸ್ಥಾಪಕ ಅಧ್ಯಕ್ಷ ಎಂಬ ಹೆಗ್ಗಳಿಕೆಗೂ ಪಾತ್ರರಾದ ಇವರು 2002ರಿಂದ 2004ರವರೆಗೆ ಕರ್ನಾಟಕ ಹೈಕೋರ್ಟ್ ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. 2004ರಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರಾಗಿ ನೇಮಕಗೊಂಡು 2006ರ ಮೇ 2ರವರೆಗೂ ಆ ಸೇವೆಯನ್ನು ಸಮರ್ಥವಾಗಿ ನಿಭಾಯಿಸಿ, ಕಾನೂನು ಸಾಕ್ಷರತೆ ಕಾರ್ಯಕ್ರಮಗಳನ್ನು ರಾಜ್ಯದ ಉದ್ದಗಲಕ್ಕೂ ಆಯೋಜಿಸಿದರು.

ತನ್ನ ಸಮಾಜದ ಬಗೆಗೆ ಅಪಾರ ಅಭಿಮಾನ ಹೊಂದಿರುವ ಇವರು ಬೆಂಗಳೂರು ಬಂಟರ ಸಂಘದ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದರು. 2 ಬಾರಿ ಸಂಘದ ಗೌರವ ಕಾರ್ಯದರ್ಶಿಯಾಗಿಯೂ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಸೇವೆಯನ್ನು ಸಲ್ಲಿಸಿದ್ದಾರೆ.

## ನಿವೃತ್ತಿಯ ಬಳಿಕ

ನಿವೃತ್ತಿಯ ನಂತರವೂ ನ್ಯಾಯಾಂಗ ವಲಯದಲ್ಲಿ ಸಕ್ರಿಯರಾಗಿಯೇ ಮುಂದುವರಿದ ನ್ಯಾಯಮೂರ್ತಿ ಶೆಟ್ಟಿಯವರು, ಸುಪ್ರೀಂಕೋರ್ಟ್ ವಕೀಲರಾಗಿ ಸೇವೆ ಆರಂಭಿಸಿದರು. ದೆಹಲಿ ಹೈಕೋರ್ಟ್ ಹಾಗೂ ಇತರ ಹೈಕೋರ್ಟ್‌ಗಳಲ್ಲೂ ವಕೀಲರಾಗಿ ಸೇವೆ ಮುಂದುವರಿಸಿದರು. ಕರ್ನಾಟಕ, ತೆಲಂಗಾಣ, ಪುದುಚೇರಿ ಹಾಗೂ ಆಂಧ್ರಪ್ರದೇಶ ಸರ್ಕಾರದ ಪರವಾಗಿಯೂ ವಾದ ಮಂಡಿಸಿದ್ದಾರೆ.


ಛತ್ತೀಸ್‌ಗಢದ ಅಂಜನಾ ಹಿಲ್ಸ್ ಗಣಿಯಲ್ಲಿ ಸಂಭವಿಸಿದ ಸ್ಫೋಟ ಪ್ರಕರಣದ ಬಗ್ಗೆ ಅಧ್ಯಯನ ನಡೆಸಲು ಸುಪ್ರೀಂಕೋರ್ಟ್ ರಚಿಸಿದ್ದ ಏಕಸದಸ್ಯ ಆಯೋಗದ ಮುಖ್ಯಸ್ಥರಾಗಿದ್ದರು. 2016ರ ಫೆಬ್ರವರಿಯಲ್ಲಿ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯರಾಗಿಯೂ ನಿಯುಕ್ತರಾದರು. ಅಮೆರಿಕ, ಬ್ರಿಟನ್, ನ್ಯೂಜಿಲೆಂಡ್, ಆಸ್ಟ್ರೇಲಿಯಾ, ಸಿಂಗಾಪುರ, ಸ್ವಿಡ್ಜರ್‌ಲೆಂಡ್, ಫ್ರಾನ್ಸ್, ಮಲೇಷ್ಯಾ, ಥಾಯ್ಲೆಂಡ್ ಹೀಗೆ ಹಲವು ದೇಶಗಳಲ್ಲಿ ಪ್ರವಾಸ ಕೈಗೊಂಡು ಕಾನೂನು ಕ್ಷೇತ್ರದ ಬಗ್ಗೆ ಆಳವಾದ ಜ್ಞಾನ ಸಂಪಾದಿಸಿದ್ದಾರೆ.

ತಮ್ಮ ಸೇವಾ ಹಿರಿತನ ಮತ್ತು ಅನುಭವದ ಹಿನ್ನೆಲೆಯಲ್ಲಿ 2017ರ ಜನವರಿ 25ರಂದು ಕರ್ನಾಟಕ ಲೋಕಾಯುಕ್ತರಾಗಿ ನೇಮಕಗೊಂಡರು.

♦ ರವಿರಾಜ ಎಸ್. ಶೆಟ್ಟಿ

**ಸ್ನೇಹ ಚಿಂತನೆ ಬಗೆಗೆ ತಮ್ಮ ಅಭಿಪ್ರಾಯ ಮತ್ತು ಸಲಹೆ ಸೂಚನೆಗಳಿಗೆ ಮುಕ್ತ ಸ್ವಾಗತ.**

# ಮಂಗಳೂರಿನ 'ಲೈಟ್ ಹೌಸ್ ಹಿಲ್' ರಸ್ತೆಗೆ ಮೂಲ್ಕಿ ಸುಂದರರಾಮ್ ಶೆಟ್ಟಿಯವರ ಹೆಸರಿಡುವುದರಲ್ಲಿಯೂ ರಾಜಕೀಯವೇ?



ಎ.ಬಿ. ಶೆಟ್ಟಿ
ಮಾಜಿ ಅಧ್ಯಕ್ಷರು
ವಿಜಯಾ ಬ್ಯಾಂಕ್ ವರ್ಕರ್ಸ್ ಆರ್ಗನೈಸೇಷನ್
ವಿಜಯಾ ಬ್ಯಾಂಕ್ ಆಫೀಸರ್ಸ್ ಯೂನಿಯನ್

ಈ ದೇಶದಲ್ಲಿ, ನಾಡಿಗೆ ಸಮಾಜಕ್ಕೆ ಸೇವೆ ಸಲ್ಲಿಸಿ, ಸಮಾಜಕ್ಕೆ ಮಾದರಿಯಾಗಿ ಇನ್ನೊಬ್ಬರಿಗೆ ದಾರಿದೀಪವಾದವರ ಹೆಸರನ್ನು ನಗರದ ಪಟ್ಟಣದ ಅಥವಾ ಹಳ್ಳಿಯ ಒಂದು ಪ್ರಮುಖ ರಸ್ತೆಗೆ ಅಥವಾ ವೃತ್ತಕ್ಕೆ ಇಟ್ಟು ಅವರನ್ನು ಸದಾ ನೆನೆಯುವುದು, ಸ್ಮರಿಸಿಕೊಳ್ಳುವುದು, ಈ ದೇಶದಲ್ಲಿ ಲಾಗಾಯ್ತಿನಿಂದ ನಡೆದು ಬಂದ ಪದ್ಧತಿ, ಪರಂಪರೆ ಮತ್ತು ನಮ್ಮ ಸಂಸ್ಕೃತಿಯ ಒಂದು ಭಾಗ. ಈ ಮಾನದಂಡವೇ ವಿಜಯಾ ಬ್ಯಾಂಕ್‌ನ ಸಿಬ್ಬಂದಿಗಳು, ಅಧಿಕಾರಿಗಳು, ನಿವೃತ್ತರ ಸಂಘಗಳು ಒಂದು ಕಾಲಕ್ಕೆ ವಿಜಯಾ ಬ್ಯಾಂಕ್ ಮುಖ್ಯ ಕಛೇರಿ ಇದ್ದ ಮಂಗಳೂರಿನ ಪ್ರಮುಖ ರಸ್ತೆಗೆ ವಿಜಯಾ ಬ್ಯಾಂಕನ್ನು, ಹೋಟೆಲ್ ಮತ್ತು ಬ್ಯಾಂಕಿಂಗ್ ಉದ್ಯಮಕ್ಕೆ ಹೆಸರಾದ ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯನ್ನು ದೇಶಕ್ಕೆ, ಜಗತ್ತಿಗೆ ಪರಿಚಯಿಸಿದ ಮಹಾನ್ ಬ್ಯಾಂಕರ್ ಮೂಲ್ಕಿ ಸುಂದರರಾಮ್ ಶೆಟ್ಟಿಯವರ ಹೆಸರನ್ನು ಇಡಲು ಪ್ರೇರೇಪಿಸಿದ್ದು,

ಮೂಲ್ಕಿ ಸುಂದರರಾಮ್ ಶೆಟ್ಟಿ: ಈ ಹೆಸರೇ ಒಂದು ಸ್ಫೂರ್ತಿಯ ಚಿಲುಮೆ. ಈ ಹೆಸರನ್ನು ಕೇಳಿದಾಗ ಮನಸ್ಸು ಮತ್ತು ದೇಹಗಳೆರಡೂ ಪುಳಕಿತವಾಗುತ್ತದೆ ಎಂದು ಕೇಳುವಾಗ ಅತಿಶಯೋಕ್ತಿ ಎನಿಸಬಹುದು. ಹತ್ತಾರು ರೈತರಿಂದ ಸ್ಥಾಪಿಸಲ್ಪಟ್ಟು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿದ್ದ ಒಂದು ಸಣ್ಣ ಬ್ಯಾಂಕನ್ನು, ದಿನ ಬೆಳಗಾಗುವುದರೊಳಗೆ ದೇಶದ ಉದ್ದಗಲಕ್ಕೂ ವಿಸ್ತರಿಸಿ ರಾಷ್ಟ್ರೀಯ ಬ್ಯಾಂಕನ್ನಾಗಿ ಪರಿವರ್ತಿಸಿದ ಹೆಗ್ಗಳಿಕೆಗೆ ಪಾತ್ರರಾದ ಅವರು, ಹಣಕಾಸು ಮಂತ್ರಾಲಯ, ಹಣಕಾಸು ಮಾಧ್ಯಮ, ರಿಸರ್ವ್ ಬ್ಯಾಂಕ್, ದೇಶದ ಔದ್ಯೋಗಿಕ ವಲಯ ವಿಜಯಾ ಬ್ಯಾಂಕನ್ನು ಎದ್ದು ನೋಡುವಂತೆ ಮಾಡಿದ್ದರು. ಬ್ಯಾಂಕಿಂಗ್ ರಂಗದಲ್ಲಿ ಇವರ ಸ್ಪರ್ಧಿಗಳು ಅಚ್ಚರಿಪಡುವಂತೆ ಮಾಡಿದ್ದರು. ಬ್ಯಾಂಕ್ ಸೇವೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಇತರ ಬ್ಯಾಂಕುಗಳು ಮಡಿವಂತಿಕೆ, ಎಚ್ಚರಿಕೆ ಮತ್ತು ರಕ್ಷಣಾತ್ಮಕ ನಡೆ ತೋರಿಸುವಾಗ ದೂರದ ಈಶಾನ್ಯ ಭಾರತದಲ್ಲಿ ವಿಜಯಾ ಬ್ಯಾಂಕ್ ಶಾಖೆಗಳನ್ನು ತೆರೆದು ಬೇರೆ ಬ್ಯಾಂಕುಗಳು ಅಲ್ಲಿ ಶಾಖೆಗಳನ್ನು ತೆರೆಯಲು ಪ್ರೇರೇಪಿಸಿದ್ದರು. ಶಾಖಾ ವಿಸ್ತರಣಾ ನಿಟ್ಟಿನಲ್ಲಿ ಬೇರೆ ಬ್ಯಾಂಕುಗಳು ಹಿಂಜರಿಯುತ್ತಿರುವಾಗ, ಲೆಕ್ಕಾಚಾರ ಮಾಡುತ್ತಿರುವಾಗ ಮತ್ತು ವರ್ಷಕ್ಕೆ ಕೇವಲ ಒಂದೆರಡು ಶಾಖೆಗಳನ್ನು ತೆರೆಯಲು ತಿಣುಕುತ್ತಿರುವಾಗ, ಇವರು ಆಗಿನ ಪ್ರಧಾನ ಇಂದಿರಾಗಾಂಧಿಯವರ ಹುಟ್ಟು ಹಬ್ಬದ ದಿನ, ಒಂದೇ ದಿನ ದೇಶಾದ್ಯಂತ 26 ಶಾಖೆಗಳನ್ನು ತೆರೆದು ನೂರಕ್ಕೂ ಹೆಚ್ಚಿನ ಉದ್ಯೋಗವನ್ನು ಒದಗಿಸಿ ಬ್ಯಾಂಕಿಂಗ್ ಉದ್ಯಮದಲ್ಲಿ ಬಿರುಗಾಳಿ ಎಬ್ಬಿಸಿದರು. ಅರ್ಹತೆ ಮತ್ತು ಅನಿವಾರ್ಯತೆ ಆಧಾರದ ಮೇಲೆ ಜಾತಿ, ಮತ, ಪಂಥ ಮತ್ತು ಭಾಷೆಗಳ ಹಿಮ್ಮೇಳ ಇಲ್ಲದೆ ಇವರು ಬ್ಯಾಂಕಿನಲ್ಲಿ ಉದ್ಯೋಗ ನೀಡುತ್ತಿದ್ದರು. ಅವರ ಶಬ್ದ ಕೋಶದಲ್ಲಿ "ಮಾಡು ಇಲ್ಲವೆ ಮಡಿ" ಮಾತ್ರ ಕಾಣುತ್ತಿದ್ದು, "ನೋಡೋಣ.... ಮಾಡೋಣ"ಗಳು ಎಂದು ಇರುತ್ತಿರಲಿಲ್ಲ. ಪ್ರತಿ ವಿಚಾರದಲ್ಲೂ ಕಡಾಖಂಡಿತ ನಿರ್ಧಾರ ತೆಗೆದುಕೊಳ್ಳುತ್ತಿದ್ದು, ಎಂದೂ "ನಾಳೆ"ಗೆ ಅವಕಾಶ ನೀಡುತ್ತಿರಲಿಲ್ಲ. ಅವರು ತಮ್ಮ ನಿರ್ಧಾರಗಳಿಗೆ ಬದ್ಧರಾಗಿ ಉಳಿಯುತ್ತಿದ್ದರು ಮತ್ತು ಅದರ ಸಾಧಕ ಬಾಧಕಗಳ ಹೊಣೆ ಹೊರುತ್ತಿದ್ದರು. ಇವರ ಇಂತಹ ಸ್ತುತ್ಯಾರ್ಹ ಸಾಧನೆಗಳು ಮತ್ತು ಇಂದಿನ ದಿನಗಳಲ್ಲಿ ತೀರಾ ಅಪರೂಪವಾದ ಅವರ ವೈಶಿಷ್ಟ್ಯಗಳು, ದೇಶದಾದ್ಯಂತ ತುಂಬಿರುವ ಅವರ ಅಭಿಮಾನಿ ಬಳಗದವರನ್ನು ಅವರ ಸದಾ ನೆನಪಿಗಾಗಿ, ಮಂಗಳೂರಿನಲ್ಲಿರುವ ಪ್ರತಿಷ್ಠಿತ "ಲೈಟ್ ಹೌಸ್ ಹಿಲ್ ರೋಡ್" ಗೆ ಅವರ ಹೆಸರನ್ನು ಇಡುವಂತೆ ಪ್ರೇರೇಪಿಸಿದೆ. ಒಂದು ವ್ಯಕ್ತಿ ಬದುಕಿದ್ದಾಗ ಅವರಿಂದ ಎಲ್ಲಾ ಸಹಾಯ ಪಡೆದು ಬದುಕಿನಲ್ಲಿ ಸ್ಥಿರತೆ ಪಡೆದು, ಆ ವ್ಯಕ್ತಿ ನಿಧನರಾದಾಗ "ಯಾರೋ ಏನೋ" ಎಂದು ಮರೆತುಬಿಡುವ ಕಾಲದಲ್ಲಿ, ಮೂಲ್ಕಿ ಸುಂದರರಾಮ್ ಶೆಟ್ಟಿಯವರನ್ನು ಅವರ ನಿಧನದ ದಶಕದ ನಂತರವೂ ಸ್ಮರಿಸುವುದು ಸಮಕಾಲೀನ ಇತಿಹಾಸದಲ್ಲಿ "ನಭೂತೋ ನ ಭವಿಷ್ಯತಿ" ಎನ್ನಬಹುದು. ವಿಜಯಾ ಬ್ಯಾಂಕ್ ಸಿಬ್ಬಂದಿ ಹಾಗೂ ಅಧಿಕಾರಿ ಸಂಘಟನೆಗಳಿಂದ ಈ ನಿಟ್ಟಿನಲ್ಲಿ 2010 ರಿಂದಲೂ ತಯಾರಿ ನಡೆಸುತ್ತಿದ್ದು 2015 ರಲ್ಲಿ ಅವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಇಂತಹಾ ಗೌರವ ನೀಡುವ ರೂಪುರೇಶೆ ವಿನ್ಯಾಸಗೊಂಡಿತ್ತು. ಮೂಲ್ಕಿ ಸುಂದರರಾಮ್ ಶೆಟ್ಟಿಯವರ ಹೆಸರಿನಲ್ಲಿ ಮಂಗಳೂರಿನಲ್ಲಿರುವ ಪ್ರಮುಖ ರಸ್ತೆಗೆ ಹೆಸರಿಡಬೇಕೆಂಬ ವಿಚಾರದಲ್ಲಿ ಈ ಸಂಘಟನೆಗಳು ಕ್ರಮಬದ್ಧವಾಗಿ ಮತ್ತು ಕಾನೂನಾತ್ಮಕವಾಗಿ ಹಾಗೂ ನೀತಿ ನಿಯಮಾವಳಿಯಂತೆ ನಡೆಸಲು, ಸಂಬಂಧಪಟ್ಟ ಮಂಗಳೂರು ನಗರ ಪಾಲಿಕೆ, ಪೋಲೀಸ್ ಆಯುಕ್ತರು, ಜಿಲ್ಲಾಧಿಕಾರಿ ಕಾನೂನು ಮತ್ತು ಸುವ್ಯವಸ್ಥೆ ವಿಭಾಗ, ಸಾರ್ವಜನಿಕ ಅಹವಾಲು, ಪೌರಾಡಳಿತ ಇಲಾಖೆ ಇವರೆಲ್ಲರ

ಅನುಮತಿ ಪಡೆದು ರಾಜ್ಯಪಾಲರ ಒಪ್ಪಿಗೆಯೊಂದಿಗೆ 24.05.2007 ರಂದು ರಾಜ್ಯ ಸರ್ಕಾರದ ಅನುಮೋದನೆ ಪಡೆದಿತ್ತು.

ಅಚ್ಚರಿಯೆಂದರೆ ಜುಲೈ 2ನೇ ತಾರೀಖು ಈ ರಸ್ತೆಗೆ ನಾಮಕರಣ ಮಾಡಬೇಕೆನ್ನುವ ಏರ್ಪಾಡು ನಡೆಯುತ್ತಿರುವಾಗಲೇ Law and Order ಹೆಸರಿನಲ್ಲಿ ಈ ಮೊದಲು ಅನುಮೋದನೆ ನೀಡಿದ ಅಧಿಕಾರಿಗಳೇ ಮುಂದಿನ ಆದೇಶದವರೆಗೆ ರಸ್ತೆ ನಾಮಕರಣ ಮಾಡಲು ತಡೆಯಾಜ್ಞೆ ನೀಡಿದ್ದು, ದೇಶಾದ್ಯಂತ ಮೂಲ್ಕಿ ಸುಂದರರಾಮ್ ಶೆಟ್ಟಿ ಅಭಿಮಾನಿಗಳನ್ನು ದಿಗ್ಭ್ರಾಂತಗೊಳಿಸಿದೆ. ಸುಂದರರಾಮ್ ಶೆಟ್ಟಿಯವರ ಮಾನವೀಯತೆಯ ಗುಣದಿಂದ ಬದುಕು ಪಡೆದ ಲಕ್ಷಾಂತರ ಜನರು ಸರ್ಕಾರದ ಈ ತಡೆಯಾಜ್ಞೆಯಿಂದ ವ್ಯಾಕುಲಗೊಂಡಿದ್ದಾರೆ. ಹಾಗೆಯೇ ಕೆಲವರು ಸುಂದರರಾಮ್ ಶೆಟ್ಟಿಯವರ ಹೆಸರನ್ನು ಅವರ ಹುಟ್ಟೂರಾದ ಮೂಲ್ಕಿಯಲ್ಲಿ ಯಾವುದಾದರೂ ರಸ್ತೆಗೆ ಇಡಲಿ ಎಂದು ಸೂಚಿಸಿರುವುದು ಶೆಟ್ಟಿಯವರ ಅಭಿಮಾನಿಗಳನ್ನು ಕೆರಳಿಸಿದೆ. ನೆಹರು ಕುಟುಂಬದವರ ಹೆಸರನ್ನು ದೇಶಾದ್ಯಂತೆ ಸುಮಾರು 430 ಕ್ಕೂ ಹೆಚ್ಚು ಸಂಸ್ಥೆ ಮತ್ತು ರಸ್ತೆಗಳಿಗೆ ಇಟ್ಟಿದ್ದು, ಅವರನ್ನು ಅವರ ಹುಟ್ಟೂರಾದ ಅಲಹಾಬಾದ್‌ಗೆ ಏಕೆ ಸೀಮಿತ ಮಾಡಿಲ್ಲ? ಮೂಲತಃ ಬಲ್ಗೇರಿಯಾ ದೇಶದವರಾದ ಮದರ್ ಥೆರೇಸಾ ಅವರ ಹೆಸರನ್ನು ಭಾರತದ ರಸ್ತೆಗಳಿಗೆ ಇಟ್ಟಿಲ್ಲವೇ? ಕೆಲವು ಮಹಾನ್ ವ್ಯಕ್ತಿಗಳಿಗೆ ಯಾವುದೇ ಗಡಿ ಇರುವುದಿಲ್ಲ ಎನ್ನುವ ಸತ್ಯವನ್ನು ಕೆಲವರು ತಿಳಿದಿರುವುದು ವಿಶಾದನೀಯ. ಸೈಂಟ್ ಅಲೋಷಿಯಸ್ ಕಾಲೇಜ್ ಹತ್ತಿರದಲ್ಲಿರುವ ಈ ರಸ್ತೆಗೆ 'ಸೈಂಟ್ ಅಲೋಷಿಯಸ್' ಹೆಸರು ಇತ್ತು ಎನ್ನುವುದಕ್ಕೆ ನಗರ ಪಾಲಿಕೆಯಲ್ಲಿ ಯಾವುದೇ ದಾಖಲೆ ಪುರಾವೆಗಳು ಇಲ್ಲವೆಂದು ಹೇಳಲಾಗುತ್ತಿದೆ. ಈ ಹೇಳಿಕೆ ಸತ್ಯವನ್ನು ತಿರುಚುವ ಮತ್ತು ಹಾದಿ ತಪ್ಪಿಸುವ ಪ್ರಕ್ರಿಯೆ ಎನ್ನಬಹುದು. ರಸ್ತೆಗೆ ನಾಮಕರಣ ಮಾಡುವ ಪ್ರಕ್ರಿಯೆಗೆ ಅನುಮೋದನೆ ನೀಡುವ ಯಾವುದೇ ಹಂತದಲ್ಲಿ ವಿರೋಧ ವ್ಯಕ್ತಪಡಿಸದೆ ಕೊನೇ ಹಂತದಲ್ಲಿ ಕೆಂಪು ನಿಶಾನೆ ತೋರಿಸಿದ್ದು ಪ್ರಜ್ಞಾವಂತರವನ್ನು ವ್ಯಾಕುಲಗೊಳಿಸಿದೆ. ರಸ್ತೆಗೆ ಮೂಲ್ಕಿ ಸುಂದರರಾಮ್ ಶೆಟ್ಟಿಯವರ ಹೆಸರನ್ನು ನಾಮಕರಣ ಮಾಡುವ ವಿಚಾರದಲ್ಲಿ ಹೆಡ್ ಕೌಂಟ್ ಮಾಡಿದರೆ, ಈ ನಡೆಯ ವಿರುದ್ಧ ಉಸಿರು ಕಾಣಲಾರದು ಎನ್ನುವ ಅಭಿಪ್ರಾಯವನ್ನು ತಳ್ಳಿ ಹಾಕಲಾಗದು.

ಇದರಲ್ಲಿ ಯಾವುದೇ ರಾಜಕೀಯ ಪಕ್ಷ ಮತ್ತು ಕೋಮು ಮತೀಯ ಸಂಘಟನೆಗಳ ಯಾವುದೇ ಸಣ್ಣ ಸೋಂಕು ಇರಲಿಲ್ಲ. ಜಾತಿ, ಮತ, ಪಂಥ ಮತ್ತು ಭಾಷೆ ಮೀರಿದ ಒಬ್ಬ ಮಹಾನ್ ಮಾನವತಾವಾದಿ ಸಾಧಕನನ್ನು ಅವರು ಮನುಕುಲಕ್ಕೆ ನೀಡಿದ ಅವಿಸ್ಮರಣೀಯ ಸೇವೆಗೆ ಸಲ್ಲಿಸುವ ಗೌರವ ನೀಡುವ ಸಮಾರಂಭವಾಗಿತ್ತು. ಈ ದೇಶದಲ್ಲಿ ಪ್ರತಿ ಒಂದು ರಂಗದಲ್ಲೂ 'ಕ್ಷುಲ್ಲಕ ರಾಜಕೀಯ' ತನ್ನ ದಾಳವನ್ನು ಅಗೋಚರವಾಗಿ ನಡೆಸುತ್ತದೆ ಎನ್ನುವುದಕ್ಕೆ ಇದು ಇನ್ನೊಂದು ಉದಾಹರಣೆ. ಇಂತಹಾ ಸಂದರ್ಭಗಳನ್ನು 'ರಾಜಕೀಯ' ಬಿಡುವುದಿಲ್ಲ ಎನ್ನುವುದು. ವಿಷಾದವೆಂದರೆ ಒಂದು ಮಹಾನ್ ವ್ಯಕ್ತಿಗೆ ಇಂತಹಾ ಸಂಕಷ್ಟ ಬಂದರೂ, ಜಿಲ್ಲೆಯ ಮುಂದಿನ ಸಾಲಿನ ರಾಜಕೀಯ ಧುರೀಣರು ಮೌನವಾಗಿರುವುದರ ಹಿಂದಿನ ಕಾರಣ ಅರ್ಥವಾಗುತ್ತಿಲ್ಲ. ಅನ್ಯಾಯವನ್ನು ಮೌನವಾಗಿ ನೋಡುವುದು ಪ್ರತಿಭಟಿಸದಿರುವುದಕ್ಕಿಂತ ಹೆಚ್ಚು ಅಪರಾಧ ಎಂದು ಇವರು ತಿಳಿಯದಿರುವುದು ಅರ್ಥವಾಗುತ್ತಿಲ್ಲ.

ಹಠಾತ್ತಾಗಿ ನೀಡಿದ ತಡೆಯಾಜ್ಞೆಗೆ ಯಾವುದೇ ಅರ್ಥಪೂರ್ಣ ಕಾರಣಗಳು ಕಾಣುತ್ತಿಲ್ಲ. ಮೇಲು ನೋಟಕ್ಕೆ ನೀಡುವ ಕಾರಣಗಳಿಗೆ ತೂಕವಿಲ್ಲ. ಮೂಲ್ಕಿ ಸುಂದರರಾಮ್ ಶೆಟ್ಟಿಯವರು ಸಮಾಜಕ್ಕೆ, ಬ್ಯಾಂಕಿಂಗ್ ವಲಯಕ್ಕೆ ನೀಡಿದ ಅಪಾರ ಕೊಡುಗೆಯನ್ನು ಗುರುತಿಸಿ ಈ ಮೊದಲೇ ಮಂಗಳೂರಿನ 'ಲೈಟ್ ಹೌಸ್ ಹಿಲ್ ರೋಡ್'ಗೆ ಅವರ ಹೆಸರನ್ನು ಇಡಬೇಕೆಂಬ ಸರ್ಕಾರ ಆದೇಶಕ್ಕೆ ನೀಡಿದ ತಡೆಯಾಜ್ಞೆಯನ್ನು ಸರ್ಕಾರ ಕೂಡಲೇ ಹಿಂತೆಗೆದುಕೊಳ್ಳಬೇಕು. ಆಗಲೇ ಮೂಲ್ಕಿ ಸುಂದರರಾಮ್ ಶೆಟ್ಟಿಯವರಿಗೆ ಗೌರವ ಸಿಕ್ಕಿದಂತಾಗುತ್ತದೆ. ಕಾನೂನಿನ ಚೌಕಟ್ಟಿನಲ್ಲಿ ನೀಡಿದ ಆದೇಶಕ್ಕೆ ನಿಜವಾದ ಬೆಲೆ ಸಿಕ್ಕಿ ಸರ್ಕಾರದ ಮೇಲೆ ಜನತೆಗೆ ಇರುವ ವಿಶ್ವಾಸವನ್ನು ಹೆಚ್ಚಿಸುತ್ತದೆ.



## ಸ್ನೇಹ ಚಿಂತನೆಯ ಜಾಹೀರಾತು ದರಗಳು

| | ಪುಟ | ಪ್ರತೀ ಸಂಚಿಕೆಗೆ | 6 ಸಂಚಿಕೆಗೆ | 12 ಸಂಚಿಕೆಗೆ | ಜಾಹೀರಾತಿನ ಅಳತೆ |
|---|---|---|---|---|---|
| 1 | ಒಳ ಪುಟ – ಕಲರ್ | 5000 | 25000 | 45000 | 19.5 x 16 cm |
| 2 | ಒಳ ಪುಟ – ಬ್ಲ್ಯಾಕ್ & ವೈಟ್ | 3000 | 15000 | 25000 | 19.5 x 16 cm |
| 3 | ಅರ್ಧ ಪುಟ – ಬ್ಲ್ಯಾಕ್ & ವೈಟ್ | 1500 | 6000 | 12000 | 9.5 x 16 cm |

ತಮ್ಮ ಜಾಹೀರಾತು ಕೋರಲ್ ಡ್ರಾ/ ಪಿ.ಡಿ.ಎಫ್./ಜೆ.ಪಿ.ಜೆ.ನಲ್ಲಿ ವಿನ್ಯಾಸ ಮಾಡಿ ಸಿ.ಡಿ.ಯಲ್ಲಿ ಅಥವಾ ಸಂಘದ ಇಮೈಲ್: (info@buntsanghablr.com) ಗೆ ಕಳುಹಿಸಬಹುದು.

# SEVENTY YEARS OF FREEDOM AND PARTITION


***Exploring some lesser known incidents of the Movement***



A.Girish Rai

*"Tomorrow we will be free from Bondage to the British" said Gandhiji in Calcutta on the eve of Independence, "But from midnight tonight Hindustan will be broken into pieces, so tomorrow will be both a day of rejoicing and of mourning", he added sadly. This partition displaced over 14 million People, Hindus, Muslims, Sikhs- left to India and to the newly created Pakistan, where life stood divided. This is the 70th Anniversary of Independence as also the 70th year of Partition of the country.*

Indian Independence Movement virtually began with 1857 Mutiny, was a long drawnout struggle as also a Revolution culminated in India becoming Independent on 15th August 1947. Many important and lesser known events shaped this and ultimately resulted once in a life time event. After the First world war, Britain became the only World Power with its resources, colonial power which extended from Hongkong to South Africa, Australia to Canada and all four corners of the World. London then was the financial capital of the world, even though the Industrial Revolution evolved in Europe, it blossomed in London. People with money from different countries deposited their wealth in London. This Economic muscle enabled England to invest vastly in infrastructure development, Industries production of commercial goods, Transport and Railways. Then England needed sustained supply of Raw material to the ever growing industries. India was a rich country when the British Parliament took full control of India, it's GDP was 23% of the World GDP. India not only supplied raw material, it also provided ready market for the finished goods. India's GDP dropped down to 4%, and the Textile export



from India which was 27% in the beginning but India was forced to import textiles by the time Britishers left India. British Industries thrieved because of raw materials, minerals, yarn, spices and silk from India. Lord Curzon informed British Parliament "If India goes out of our Hands, we will become an ordinary country." The military and industrial strength made England a super power.

### Prelude to Partition

The Second World War broke the backbone of Britain and it almost came to the verge of bankruptcy. Britain had spent 3 Billion Pounds on the Second world War(1939-1945) out of which India's contribution was 1.25 Billion. In addition to this Britain got 17 Million rounds of bullets, 6 lakh Rifles, 22 million pairs of uniforms, 370 million tonnes of food materialfrom India and 25 lakh Indian soldiers



fought in this war. Mahatma Gandhiji and other leaders were confident that India will become free soon after the second world war. By then Mohammed Ali Jinnah, who returned from London also plunged into the movement. Then the radicals in the congress demanded Home Rule. Gandhiji was a dominant leader. Jinnah was disliking Gandhiji, whom he considered as an outsider, speaking Gujarathi, Hindi and advocated civil dis-obidience movement. The difference between Gandhiji and Jinnah made the partition of India inevitable. The moment of freedom to India was drawing nearer, British Government put forth a proposal to form a Representative forum of Congress and Muslim league during july 1946. This was in effect hinting that freedom will be granted within months. Both parties agreed to this Memorandum and British government approved the Memorandum. Then all of a sudden Muslim league realised it's mistake and opposed the Proposal that it would not endorse the Congress view of one Nation. When congress won the provincal elections during 1937 the Muslim league did not succeed even in Muslim majority constituencies. This opened eyes of Jinnah who thought unless the country is divided on Hindu Muslim basis, he had no chance of becoming the Prime Minister in Hindu majority India. Mohammed Ali Jinnah requested the British Government to revise the proposal by including the Two Nation Theory. The Government owing to pressure of Jinnah and Muslim League, revised the proposal agreeing to the creation of Pakistan but congress opposed. Then Md.Jinnah warned if the country was not divided, serious consequences will follow. It was infomed that Muslim League had planned a direct action on 29th July 1946. As Jinnah succeeded in unifying Muslims of Avadh, Sindh, Punjab, Bengal and Hydrabad, he thought he was representing half of India. Jinnah started speaking emotionally that Muslims will be oppressed in the unified India. He also maintained good releationship with British rulers. Almost all the top leaders like Gandhiji, Sardar Patel, Nehru, Subhash Chandra Bose, Veer Savarkar and others were jailed, Jinnah though was a freedom fighter was never arrested and jailed.

**Direct Action Day**

East Bengal was a Muslim majority province under the Britishers. It had a Muslim Prime Minister. The population was 56% Muslims while the Hindu population was 42% . The hidden agenda of the Direct Action Day was to create fear and insecurtiy amongst the Hindus and reduce the Hindu majority in Calcutta city by large scale killing of Hindus. Almost all Muslim houses were intimated about the plan and asked them to store swords, longs and petrol. Messages also were sent before 16th August 1946 about the Direct Action Day to be observed in all the provinces of India. But Hindus ignored this warning as they did not learn from History, like the invasion of Ghazni, Ghori and other muslim invaders. Hussain Sahib Suhravardhi, the Prime Minister of

Bengal province and religious leader Khwaja Nizamuddin on that day addressed the rally at Culcutta requesting all Muslims to participate in this Holy act, no one will stop it, was the assurance. Following this frenzied mob broke into all the areas, roads, went on a rampage for the next 72 hours killing Hindus, Ladies and also Children, looting and molesting women. 'Maarke Lenge Pakistan, Lekhe Rahenge Pakistan' was heard in every corner of Calcutta. This was called the 'Week of long knives' in which thousands of Hindus were mercilessly murdered and lakhs became homeless destitutes.If congress leaders did not consent to the creation of Pakistan, Calcutta type violence will spread to near by Bihar, UP warned muslims. The congress leadership then unwillinginly agreed for the demand. Incidentally then two leaders Rajaji and Ambedkar said that partition was better than keeping such animosity within our country.

### The Partition

Britishers divided the provinces which were under their direct suzerainty into India and Pakistan as per the Indian Independence Act passed by British Parliament on 3rd June 1947. They permitted the remaining nearly 600 Principalities that the British authority would end on August 15th 1947.Accordingly these Principalities will revert back to the position they were in before coming under British rule. In short the provinces were free to remain independent, merge with India or Join Paksitan, was the advise given by the Viceroy to the provinces. The Rajas of Thiruvananthapura and Kashmir wanted to remain as Independent states. Hydrabad and Junagad in Gujarath, though surrounded by India and with 90%



Hindu population, attempted to join Pakistan. But due to timely and strong action of India's Iron Man Sardar Vallabhai Patel all the 554 small and big principalities including Thiruvananthapura, Kashmir, Junagad and Hydrabad were integrated into India at diferent times making India the Seventh largest country in the world. Before this integration, Indian communists requested the British authorities to divide India into Seventeen indpendent countries which the Britishers declined. The hesitation of Partition has left troubled and disturbed history behind.

### Economic Depression

Germany unconditinally surrendered on 2nd May 1945, ending the 2nd World War, the Allied forces divided Germany between two global blocks in the East and West. Germany was divided into East and West Germany, more than seven million prisoners left Germany, over 10 million German speaking refugees, returned to Germany. This was two years before India became independent. West Germany under chancellor Konrad Adenauer experienced Economic miracle and became one of the most prosperous economies in Europe. West Germany built good releationship with France, USA and Isreal. East Germany with a stagnant

economy did not prosper well and the Berlin Wall stopped the flow of refugees to the West Germany. Finally the West and East Germany reunited during 1990, when the Berlin wall was razed to the ground.

United States of America was in the grip of a great Economic Depression during 1930's. President Franklin.D.Roosevelt assumed office in 1933 and acted swiftly to stabilise the Economy, provide jobs and relief to the suffering People. The Government Instituted many Projects as per the New Deal. Unemployment reached alarming level, then



President Franklin Roosevelt introduced other measures, urged People to put their savings in Banks. The National Industrial Recovery Act and the Tennessee Valley Authority created thousands of jobs, the country slowly started to recover from the depression.

## Kalat offer

